| PUBLICATION NAME : | Sanje Samaya |
|---|---|
| DATE : | 01/03/2025 |
| PAGE : | 04 |

# ಇಡಿಐಐನಿಂದ ಉದ್ಯಮಶೀಲತೆಯ 16ನೇ ದ್ವೈವಾರ್ಷಿಕ ಸಮ್ಮೇಳನ ಆಯೋಜನೆ




**ಅಹಮದಾಬಾದ್:** ಅಹಮದಾಬಾದ್‌ನ ಆಂತ್ರಪ್ರಿನ್ಯೂರ್ಶಿಪ್ ಡೆವಲಪ್‌ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಇಡಿಐಐ)ನ 16ನೇ ದ್ವೈವಾರ್ಷಿಕ ಸಮ್ಮೇಳನ (3 ದಿನಗಳು) ಫೆಬ್ರವರಿ 26ರಂದು ಸಂಸ್ಥೆಯ ಕ್ಯಾಂಪಸ್ ನಲ್ಲಿ ಪ್ರಾರಂಭವಾಯಿತು. ಉದ್ಯಮಶೀಲತೆ ಕುರಿತಾದ ಈ ಮೂರು ದಿನಗಳ ಸಮ್ಮೇಳನವು ಫೆ.28ರಂದು ಸಮಾರೋಪಗೊಳ್ಳಲಿದೆ. ಈ ಸಮ್ಮೇಳನವು ಸಂಶೋಧಕರು, ಶಿಕ್ಷಣ ತಜ್ಞರು ಮತ್ತು ಅಭ್ಯಾಸಿಗಳಿಗೆ ಉದ್ಯಮಶೀಲತೆಯ ಅಭಿವೃದ್ಧಿಯ ವಿವಿಧ ಕ್ಷೇತ್ರಗಳ ಕುರಿತಾದ ಅವರ ಸಂಶೋಧನೆಯ ಅಧ್ಯಯನಗಳು ಮತ್ತು ಫಲಿತಾಂಶಗಳನ್ನು ಹಂಚಿಕೊಳ್ಳಲು ವೇದಿಕೆಯಾಗಿದೆ. ಇಡಿಐಐ 1994ರಿಂದಲೂ ಈ ದ್ವೈವಾರ್ಷಿಕ ಸಮ್ಮೇಳನವನ್ನು ಆಯೋಜಿಸುತ್ತಿದೆ.

ಉದ್ಯಮಶೀಲತೆಯ ತತ್ವ ಮತ್ತು ರೂಢಿ, ಉದ್ಯಮಶೀಲತೆಯ ಶಿಕ್ಷಣ, ಉದ್ಯಮಶೀಲತೆಯ ವ್ಯವಸ್ಥೆ, ಮನಃಶಾಸ್ತ್ರ ಮತ್ತು ಉದ್ಯಮಶೀಲತೆ, ಎಂ.ಎಸ್.ಎಂ.ಇ.ಉದ್ಯಮಶೀಲತೆ, ತಂತ್ರಜ್ಞಾನ ಮತ್ತು ಡಿಜಿಟಲ್ ಉದ್ಯಮಶೀಲತೆ, ಸ್ಟಾರ್ಟಪ್ ಮತ್ತು ಆವಿಷ್ಕಾರ, ಹಸಿರು ಮತ್ತು ಸುಸ್ಥಿರ ಉದ್ಯಮಶೀಲತೆ, ಸಾಮಾಜಿಕ ಉದ್ಯಮಶೀಲತೆ, ಸಂಸ್ಕೃತಿ, ಸಂಪ್ರದಾಯ ಮತ್ತು ಮೌಲ್ಯಾಧಾರಿತ ಉದ್ಯಮಶೀಲತೆ, ಮಹಿಳಾ ಉದ್ಯಮಶೀಲತೆ, ಗ್ರಾಮೀಣ ಉದ್ಯಮಶೀಲತೆ ಮತ್ತು ಹೊಸತನದ ಉದ್ಯಮಶೀಲತೆ ಮತ್ತು ಹೊಸ ಉದ್ಯಮ ಸೃಷ್ಟಿ ಹಾಗೂ ಕುಟುಂಬ ವ್ಯವಹಾರಗಳ ಕುರಿತಾದ 9 ದೇಶಗಳ ವಿದ್ವಾಂಸದಿಂದ 148 ಸಂಶೋಧನಾ ಪ್ರಬಂಧಗಳು ಮತ್ತು ಅಧ್ಯಯನಗಳನ್ನು ಮಂಡಿಸಲಾಯಿತು.

ಟಿ.ವಿ.ರಾವ್ ಲರ್ನಿಂಗ್ ಸಿಸ್ಟಮ್ಸ್ ಪ್ರೈ.ಲಿ.ಯ ಸಂಸ್ಥಾಪಕ ಮತ್ತು ಅಧ್ಯಕ್ಷ ಹಾಗೂ ಅಹಮದಾಬಾದ್ ನ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಮಾಜಿ ಪ್ರೊಫೆಸರ್ ಮುಖ್ಯ ಅತಿಥಿ ಪ್ರೊ.(ಡಾ.)ಟಿ.ವಿ. ರಾವ್ ಉದ್ಘಾಟಿಸಿದರು. ಇಡಿಐಐ ಡೈರೆಕ್ಟರ್ ಜನರಲ್ ಡಾ.ಸುನಿಲ್ ಶುಕ್ಲಾ, ನವದೆಹಲಿಯ ಐ.ಐ.ಎಲ್.ಎಂ.ನ ಡೈರೆಕ್ಟರ್ ಜನರಲ್ ಡಾ.ಹರಿವಂಶ್ ಚತುರ್ವೇದಿ ಮಾಡರೇಟ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನಿರ್ದೇಶಕ ಡಾ.ದೀಪಕ್ ಕುಮಾರ್ ಶ್ರೀವಾಸ್ತ, ಗಾಂಧಿನಗರದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ನಿರ್ದೇಶಕ ಡಾ.ರಜತ್ ಮೂನಾ, ಗುಜರಾತ್ ಅಹಮದಾಬಾದ್ ನ ಟೆಕ್ನಲಾಜಿಕಲ್ ಯೂನಿವರ್ಸಿಟಿಯ ಕುಲಪತಿ ಪ್ರೊ.ಡಾ. ರಜುಲ್ ಕೆ.ಗುಜ್ಜಾರ್, ಅಹಮದಾಬಾದ್ ನ ಆದಾನಿ ಯೂನಿವರ್ಸಿಟಿಯ ಪ್ರೊವೊಸ್ಟ್ ಡಾ. ರವಿ ಪಿ.ಸಿಂಗ್ ಮತ್ತು ಗಾಂಧಿನಗರದ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಫ್ಯಾಷನ್ ಟೆಕ್ನಾಲಜಿಯ ನಿರ್ದೇಶಕ ಡಾ. ಸಮೀರ್ ಸೂದ್ ಇದ್ದರು. ಉದ್ಯಮಶೀಲತೆ ಮತ್ತು ಸಮಾಜ ಕುರಿತಾದ ಜರ್ನಲ್ ಆಫ್ ಆಂತ್ರಪ್ರಿನ್ಯೂರ್ಶಿಪ್ 33ನೇ ಆವೃತ್ತಿ (ಮತ್ತು 3ನೇ ವಿಶೇಷ ಆವೃತ್ತಿ) ಯನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.